Local Fund Dispensary to Sulibele.

Q.—620. Sm. LAKSHMIDEVI RAMANNA (Hoskote-Anekal).—

Will the Government be pleased to state :—

(*a*) since how many years representations are being received from the people of the area praying for the grant of a local fund dispensary to Sulibele town in Hoskote taluk ;

(*b*) when the said dispensary will be given ?

A.—Sri T. CHANNIAH (Minister for Public Health and Local Self-Government).—

(*a*) Since 1945.

(*b*) It is not considered necessary to grant a dispensary to Sulibele.

Maternity Hospitals, provision in Hoskote and Anekal Towns.

Q.—623. Sm. LAKSHMIDEVI RAMANNA (Hoskote-Anekal).—

Will the Government be pleased to state :—

(*a*) whether it has come to their notice that inconvenience is being caused owing to want of fully-equipped maternity hospitals in Hoskote and Anekal towns ;

(*b*) whether maternity hospitals will be provided to these taluks from this year itself by providing funds from the State ?

A.—Sri T. CHANNIAH (Minister for Public Health and Local Self-Government).—

(*a*) No.

(*b*) A Women's Dispensary at Anekal is functioning since 1932 and the Women's Section of the Combined Dispensary at Hoskote is functioning from 7th February 1955.

MYSORE (RELIGIOUS AND CHARITABLE) INAMS ABOLITION BILL, 1954.

Motion to consider (contd.)

1 P.M.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಮತ ಸಂಬಂಧವಾದ ಮತ್ತು ಧರ್ಮಾರ್ಥ ಸಂಬಂಧವಾದ ಇನಾಂತಿಗಳ ರದ್ದಿಯಾತಿ ಮಸೂದೆಯು ಸೆಲೆಕ್ಟ್ ಸಮಿತಿಯವರಿಂದ ಪರಿಶೀಲನೆಯಾಗಿ ಬಂದನಂತರ ಈ ಮಸೂದೆಯು ಇನ್ನೂ ಹೆಚ್ಚಿನ ಅಂಕಿ ಅಂಶಗಳಿಂದೊಡಗೂಡಿದ್ದಾಗಿರುತ್ತದೆಂದೂ ಮತ್ತು ಇದರ ವ್ಯಾಪ್ತಿಯೂ ಸಹ ಎಲ್ಲರಿಗೂ ಚೆನ್ನಾಗಿ ಗೊತ್ತಾಗುವಂತೆ ತಯಾರಿಸಲ್ಪಟ್ಟು ಈ ಸಭೆಯ ಮುಂದೆ ಬರುತ್ತದೆಂದೂ ನಾನು ಭಾವಿಸಿಕೊಂಡಿದ್ದೆನು. ಆದರೆ ನಾನು ಈ ಸೆಲೆಕ್ಟ್ ಸಮಿತಿಯವರ ವರದಿಯನ್ನು ಓದಿದ ನಂತರ ಈ ಮಸೂದೆಯಲ್ಲಿ ಅವರು ಇನ್ನೂ ಕೆಲವು ವಿಷಯಗಳನ್ನು ಅಡಕಮಾಡಿ ಇದನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತೆಂದು ನನಗೆ ಅನಿಸುತ್ತಿದೆ.

ಈಗ ಈ ದೇವಾಲಯಗಳಿಗೆ ಸೇರಿರತಕ್ಕಂಥ ಇನಾಂತಿ ಜಮೀನುಗಳನ್ನು ರದ್ದುಮಾಡಿದಮೇಲೆ ಈ ದೇವಸ್ಥಾನಗಳ ಬಗ್ಗೆ ಕೊಡಬೇಕಾಗಿರತಕ್ಕಂಥ ಸೌಲಭ್ಯಗಳೇನಿರುತ್ತವೆಯೋ ಅವುಗಳನ್ನು ಎಂದರೆ ಈ 19 ನೆಯ ಸೆಕ್ಷನ್ನಿನಲ್ಲಿ ಸೂಚಿಸಿರುವ ರೀತ್ಯಾ ಈ ತಸ್ದೀಕ್ ಮೊಬಲಗನ್ನು . . .

> "The Government shall pay to the Inamdar every year so long as the institution exists as compensation for all the rights of the Inamdar vesting in the State of Mysore under this Act, the basic annual sum as tasdik allowance."

ಎಂದಿದೆ. ಈ basic annual sum ಎಂಬುದರ ಅರ್ಥವನ್ನು 16, 17ನೆಯ ಕ್ಲಾಜುಗಳಲ್ಲಿ ವಿವರಿಸಿದ್ದಾರೆ. ಇದರ ಪ್ರಕಾರ, ಈ ಇನಾಂ ಜಮೀನಿನಿಂದ ಬರುತ್ತಿದ್ದ ಉತ್ಪತ್ತಿಯಲ್ಲಿ ಖರ್ಚು ಜಾತಾ ಉಳಿದ ಹಣವನ್ನು ಪ್ರತಿಸಾಲನಲ್ಲಿಯೂ, ಆ ದೇವಸ್ಥಾನಕ್ಕೆ ಅದರ ಕೆಲಸ ಕಾರ್ಯಗಳು ಸಾರೋದ್ಧಾರವಾಗಿ ನಡೆಯಲು ಕೊಡಬೇಕೆಂದು ಈ ಮಸೂದಾ ಕಾನೂನಿನ ಉದ್ದೇಶ. ಆದರೆ ಈ ದೇಶದಲ್ಲರತಕ್ಕ ದೇವಸ್ಥಾನಗಳ ಪೈಕಿ ಎಷ್ಟು ದೇವಸ್ಥಾನಗಳಿಂದ ಜಮೀನು ಈ ರೀತಿ ಪರಭಾರೆಯಾಗುತ್ತದೆ, ಆ ದೇವಸ್ಥಾನಗಳಿಗೆ ಕೊಡಬೇಕಾಗುವ ತಸ್ದೀಕ್ ಹಣ ಎಷ್ಟಾಗುತ್ತದೆ ಎಂಬುದು ಇದರಲ್ಲೆಲ್ಲೂ ನಮಗೆ ಗೊತ್ತಾಗುವುದಿಲ್ಲ: ಅಲ್ಲದೆ, ಈ ಮಸೂದೆಯನ್ನು ಮಂಡಿಸುವಾಗ ಕೂಡ ಇದಕ್ಕೆ ಸಂಬಂಧಪಟ್ಟ ಮಂತ್ರಿಯವರು ಈ ವಿಚಾರವನ್ನು ಹೇಳಿಲ್ಲ. ಪ್ರತಿವರ್ಷವೂ ನಮ್ಮ ದೇಶದ ಭಂಡಾರದಿಂದ ಈ ದೇವಸ್ಥಾನಗಳಿಗೆ ಕೊಡಬೇಕಾದದ್ದು ಎಷ್ಟಾಗುತ್ತದೆ ಎನ್ನುವ ಅಂಶ ಗೊತ್ತಾಗದೇ ಹೋದರೆ, ನುಮಾರಾಗಿಯಾದರೂ ಗೊತ್ತಾಗದೇ ಹೋದರೆ, ಇದರ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಇದರಲ್ಲಿ ಖದೀಮ್ ಚೆನೆಂಟುಗಳು, ಪರ್ಮನೆಂಟ್ ಚೆನೆಂಟುಗಳು ಮತ್ತು ಚೆನೆಂಟ್ಸ್ ಅಟ್ ವಿಲ್ ಎಂದಿದ್ದಾರೆ. ಇವರ . . . .

Mr. SPEAKER.—May I bring to the notice of the Hon'ble Member that in the Statement of Objects and Reasons appended to the original Bill, the amount that Government has to meet has been stated ?

Sri A. BHEEMAPPA NAIK (Molakalmuru).—Not the tasdik amount, Sir. The amount that Government has to

* Indicates that the remarks or speeches have not been revised by the Member concerned.